(ಸಭೆಯು 3 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಊ) ಬೆಳಗಾಂ ಜಿಲ್ಲೆಯಲ್ಲಿ ಕಬ್ಬನ್ನು ಅರೆಯದೇ ಇರುವುದರ ಬಗ್ಗೆ.

SRI B.I.PATIL:- Mr.Speaker, Sir, regarding excess sugarcane and the loss suffered by the farmers, yesterday the hon'ble Minister for Agriculture stated that Government has sanctioned 16 new sugar mills and announced subsidy on fertiliser as the farmers are put to lot of hardship. What the hon'ble Minister stated is for the future, but what about the existing stock of sugarcane lying with the farmers in their fields? Due to non-crushing, the farmers have suffered heavy losses. For the loss suffered by them this year, the Government should give compenstion as farmers are in great difficulty. I want an assurance from the Government in theis regard as excess sugarcane is lying with the farmers. I have no other alternative except to sit in Dharana on behalf of the affected farmers.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಒಂದೂವರೆ ಗಂಟೆಗಳ ಕಾಲ ಸುದೀರ್ಘವಾಗಿ ಇದರ ಬಗ್ಗೆ ಚರ್ಚೆಯಾಯಿತು. ಆ ಕಾರ್ಯಕ್ರಮದ ಮೇಲೆ ನಾವು ನಿನ್ನೆ ಧರಣಿ ಮಾಡಿದ್ದೆವು. ಸರಕಾರದಿಂದ ಸ್ಪಷ್ಟವಾದ ಸಮಂಜಸವಾದ ಉತ್ತರ ಬರಲಿಲ್ಲ. ಜೊತೆಗೆ ಈ ರಾಜ್ಯದಲ್ಲಿ ಬದುಕತಕ್ಕಂತಹ 6ನೇ 1ಭಾಗ ಜನ ಈ ಕೇತ್ರದಲ್ಲಿ ನಿಂತಿದ್ದಾರೆ. ನಿಜ ಹೇಳಬೇಕೆಂದರೆ ಬಹಳ ಜನ ಆತ್ಮಹತ್ಯೆ ಮಾಡಿಕೊಳ್ಳತಕ್ಕಂತಹ ಪರಿಸ್ಥಿತಿಗೆ ಬಂದಿದ್ದಾರೆ. ಬೇಕಾದರೆ ಶನಿವಾರ ಭಾನುವಾರ ಬನ್ನಿ ಕಬ್ಬಿನ ಸ್ಥಿತಿ ಏನು ಎಂದು ತಿಳಿಯುತ್ತದೆ. 8-10 ಗಾಡಿ ಕಬ್ಬನ್ನು ವಿಧಾನಸೌಧದ ಮುಂದೆ ತರಲಿಕ್ಕೆ ತಾವು ಅಪ್ಪಣೆ ಕೊಟ್ಟರೆ ಆ ಸತ್ತು ಹೋಗಿರತಕ್ಕಂತಹ ಕಬ್ಬನ್ನು ತೆಗೆದುಕೊಂಡು ಬರುತ್ತೇವೆ. ನಿಜವಾಗಲೂ ಇದರ ಬಗ್ಗೆ ಯಾವುದೇ ಗಂಭೀರವಾದ ವಿಚಾರ ಏನೂ ಇಲ್ಲ ಈಗಾಗಲೇ ನಾನು ನಿನ್ನೆ ಕೇಳಿದೆ, ನಮ್ಮ ಮಂಡ್ಯ ಕ್ಷೇತ್ರದಲ್ಲಿ ಸೇಟು ಅಂಗಡಿಗೆ ಹೋಗಿ ಕೇಳಿದರೆ ತಾಳಿ ಕೊಡು ಎಂದರೆ ಫಸ್ಟ್ ಹ್ಯಾಂಡ್ ತಾಳಿ ಬೇಕೋ , ಸೆಕೆಂಡ್ ಹ್ಯಾಂಡ್ ತಾಳಿ ಬೇಕೋ ಎಂದು ಕೇಳುತ್ತಾನೆ. ಫಸ್ಟ್ ಹ್ಯಾಂಡ್ ತಾಳಿ ಎಂದರೆ ಹೊಸದು, ಸೆಕೆಂಡ್ ಹ್ಯಾಂಡ್ ತಾಳಿ ಎಂದರೆ ರೈತರು ತೆಗೆದುಕೊಂಡು ಹೋಗಿ ಅವರ ಹತ್ತಿರ ಅಡವು ಇಟ್ಟಿರುವುದು. ಈ ಪರಿಸ್ಥಿತಿ ಅಲ್ಲಿ ಸೃಷ್ಟಿಯಾಗಿದೆ. ಯಾವುದೇ ಉತ್ತರದ ಬಗ್ಗೆ

ಗಂಭೀರವಾಗಿ ಸರ್ಕಾರ ಯೋಚನೆ ಮಾಡಿಲ್ಲ. ಹೋದ ಸಾರಿ ಸರ್ಕಾರ ಮಾಡಿದ ತಪ್ಪಿಗೆ ಈ ಸಾರಿ ನಾವು ರೈತರು ಬಹಳ ನಷ್ಟ ಕಷ್ಟವನ್ನು ಅನುಭವಿಸಿ ಅದರಿಂದ ಬೆಳ್ಳಿಗ್ಗೆಯೇ ನಾವು ಧರಣಿ ಕಾರ್ಯಕ್ರಮವನ್ನು ಶುರು ಮಾಡಬೇಕಾಗಿತ್ತು. ಪ್ರತಿದಿನ ಸದನದ ಕಲಾಪಗಳು ಕಾರ್ಯಕ್ರಮ ಸಮಂಜಸವಾಗಿ ನಡೆಯುತ್ತಿಲ್ಲ. ಸರ್ಕಾರದವರು ಸಮಂಜಸವಾಗಿ ಉತ್ತರ ಕೊಡದೆ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡದೇ ಇರುವುದರಿಂದ ನಾವು ಧರಣಿ....

ಅಧ್ಯಕ್ಷರು:- ಒಂದು ನಿಮಿಷ. ನಾನು ತಮಗೆ ಏನು ಹೇಳುತ್ತೇನೆ, ತಾವು, ಸನ್ಮಾನ್ಯ ಬಿ.ಐ.ಪಾಟೀಲರು ಮತ್ತು ವಾಟಾಳ್‌ರು ಈ ವಿಷಯವನ್ನು ಪ್ರಸ್ತಾಪಮಾಡಿದಾಗ ತಾವು ನಿನ್ನೆ ಧರಣಿಗೆ ಬಂದಾಗ ತಮ್ಮಲ್ಲಿ ವಿನಂತಿ ಮಾಡಿಕೊಂಡೆ ದಯಮಾಡಿ ಧರಣಿ ಬೇಡ ಇವತ್ತು ಕೂಡ ತಾವು ಬೆಳಿಗ್ಗೆ ಬಂದು ಧರಣಿ ಬಂದು ಮುಂದುವರಿಸುವವರಿದ್ದಿರಿ. ನನ್ನ ಮಾತಿಗೆ ತಾವು ಬೆಲೆಯನ್ನು ಕೊಟ್ಟು ಸದನದ ಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಸನ್ಮಾನ್ಯ ಸಭಾನಾಯಕರು ದೆಹಲಿಗೆ ಹೋಗಿದ್ದಾರೆ. ಬಹುಶಃ ಇವತ್ತು ಸಂಜೆ ಅಥವಾ ನಾಳೆ ಬರುತ್ತಾರೆ ಎಂದು ಕಾಣುತ್ತದೆ. ನಾನು ಏನು ಯೋಚನೆ ಮಾಡಿದೆ ಎಂದರೆ ನಿಮ್ಮ ಸಕ್ಕರೆ ಮಂತ್ರಿಗಳು ಇದ್ದರೂ ಕೂಡ ಇನ್ನುಹೆಚ್ಚು ವ್ಯಾಪಕವಾಗಿ, ಪರಿಣಾಮಕಾರಿಯಾಗಿ ಈ ವಿಚಾರದಲ್ಲಿ ಉತ್ತರವನ್ನು ಕೊಡಿಸುವ ದೃಷ್ಟಿಯಿಂದ ಸನ್ಮಾನ್ಯ ಸಭಾನಾಯಕರು ಬಂದಮೇಲೆ ಅವರ ಕಡೆಯಿಂದ ಹೇಳಿಸಿ ಎಲ್ಲಾ ಫ್ಲೋರ್ ಲೀಡರ್ಸ್‌ಗಳ ಒಂದು ಮೀಟಿಂಗ್‌ನ್ನು ಏರ್ಪಾಡು ಮಾಡಿ ಅಲ್ಲಿ ಸವಿಸ್ತಾರವಾಗಿ ಎಲ್ಲಾ ವಿಚಾರ ಚರ್ಚೆ ಮಾಡತಕ್ಕಂಥದ್ದು, ಅದರ ನಂತರ ಪೂರ್ಣ ಮಾಹಿತಿಯನ್ನು ಒಳಗೊಂಡಿರುವ ಒಂದು ಹೇಳಿಕೆಯನ್ನು ನಿಮ್ಮ ತೃಪ್ತಿಗೆ ಸಭಾನಾಯಕರು ಸದನದಲ್ಲಿ ಮಂಡಿಸುವಂತೆ ನಾನು ಮಾಡುತ್ತೇನೆ. ಆ ವಿಚಾರವನ್ನು ಸರ್ಕಾರದ ಪರವಾಗಿ ಅವರು ಕೂಡ ಸಭಾನಾಯಕರಿಗೆ ತಿಳಿಸುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಧರಣಿ ಮಾಡುವುದಕ್ಕೆ ಒಳಗೆ ಬಂದಿದ್ದಾರೆ. ಈಗ ನಾವು ಬರಬೇಕು ಎಂದು ಇದ್ದೇವೆ.

ಅಧ್ಯಕ್ಷರು:- ಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಏಕೆಂದರೆ ಸರ್ಕಾರಕ್ಕೆ ಈ ಸಮಸ್ಯೆ ಬಗ್ಗೆ ಗೊತ್ತಿದೆ, ಇಪ್ಪತ್ತು ಜಿಲ್ಲೆಗಳಲ್ಲಿ ಕಬ್ಬು ಒಣಗಿದೆ, ಬೆಂಕಿ ಹಾಕುವ ಸ್ಥಿತಿಗೆ ಬಂದಿದೆ, ಹೀಗಾದರೆ ರೈತ ಹೇಗೆ ಬದುಕುತ್ತಾನೆ? ಪರಿಹಾರವನ್ನು ಕೊಡಬೇಕಲ್ಲ. ವಿಶೇಷವಾದಂಥ ಸಂದರ್ಭದಲ್ಲಿ ರೈತ ಇಂಥ ಸಂಕಷ್ಟಕ್ಕೆ ಸಿಕ್ಕಾಗ ಸರ್ಕಾರದ ತಪ್ಪಿನಿಂದ ಸಮಯಕ್ಕೆ ಸರಿಯಾಗಿ ಕಬ್ಬು ಅರೆಯುವಂಥ ವ್ಯವಸ್ಥೆ ಮಾಡದೇ ಇರುವ ಪರಿಣಾಮ ಏನಾಗಿದೆ, ಅದಕ್ಕೆ ಅವನಿಗೆ ಪರಿಹಾರ ಕೊಡಬೇಕು. ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಬೇರೆ ಕಡೆ ಮಾಡಿದ್ದಾರೆ. ಒಂದು ಟನ್‌ಗೆ ಐದು ನೂರು ರೂಪಾಯಿ ಪರಿಹಾರ ಕೊಡಿ. ಅದನ್ನು

ಫಾಡರ್ ಆಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ?

ಅಧ್ಯಕ್ಷರು:- ತಾವೆಲ್ಲ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತು ಯಶಸ್ವಿಯಾಗಿ ಕೆಲಸ ಮಾಡಿದರೆ ರೈತರ ಸಮಸ್ಯೆಗಳು ಪರಿಹಾರವಾಗುತ್ತದೆ. ನೀವೆಲ್ಲಾ ಬಂದು ಧರಣಿ ಕುಳಿತುಕೊಂಡರೆ, ಕಲಾಪ ಸ್ಥಗಿತ ಆಗಿಬಿಡುತ್ತದೆ. ರೈತರಿಗೆ ಪರಿಹಾರ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಒಂದು ಸ್ಥಿತಿ ಗಮನಿಸುತ್ತೀರಿ ಎಂದು ಅಂದುಕೊಂಡಿದ್ದೇನೆ. ಹೊಸದಾಗಿ ತಾವು ಸಭ್ಯಾಕ್ಷರಾಗಿದ್ದೀರಿ ತಮಗೆ ಸಹಕಾರ ಕೊಡಬೇಕೆಂತಲೇ ಬಹಳ ಸಮಾಧಾನವಾಗಿ ಹೋಗುತ್ತಿದ್ದೇವೆ. ತಾವು ಇರಲಿಲ್ಲ, ಯಾವುದೋ ನಾಲ್ಕು ಜನ ಕೊಲೆಯಾದ ವಿಷಯದ ಪ್ರಸ್ತಾಪ ಮಾಡುವಾಗ ನಾವು ವಾಕ್-ಔಟ್ ಮಾಡಲಿಲ್ಲ. ಗಂಭೀರವಾಗಿ ಸರ್ಕಾರದ ಗಮನಕ್ಕೆ ತರುವ ಪ್ರಸ್ತಾಪ ಮಾಡಿದರೆ ಸಾಕು ಎಂದು ನಾವು ಇಲ್ಲೇ ಕುಳಿತುಕೊಂಡಿದ್ದೇವೆ. ಎಲ್ಲದಕ್ಕೂ ವಾಕ್‌ಔಟ್ ಮಾಡಬೇಕು, ಧರಣಿ ಮಾಡಬೇಕು ಎಂದಲ್ಲ. ಆದರೆ ಸರ್ಕಾರದವರು ನಮ್ಮ ವಿರೋಧ-ಪಕ್ಷ ಇಷ್ಟು ದೊಡ್ಡ ಸಂಖ್ಯೆಯಲ್ಲಿದ್ದರೂ ಇದನ್ನು ನಮ್ಮ ವೀಕ್‌ನೆಸ್ ಎಂದು ತಿಳಿದುಕೊಂಡಿದ್ದಾರೆ. ಪ್ರತಿಯೊಬ್ಬರೂ ಧರಣಿ, ಸತ್ಯಾಗ್ರಹ ಮಾಡುವಂಥ ಪರಿಸ್ಥಿತಿಗೆ ನಮ್ಮನ್ನು ತರುತ್ತಿದ್ದಾರೆ. ಅದಕ್ಕೆ ತಾವು ಭರವಸೆಯನ್ನು ಕೊಡುತ್ತಿದ್ದೀರಿ. ಸಭಾನಾಯಕರು ಬಂದಮೇಲೆ ಈ ಕಬ್ಬು ಹಾಳಾಗಿರುವಂಥ ರೈತರಿಗೆ 500 ರೂಪಾಯಿಯನ್ನು ಒಂದು ಟನ್‌ಗೆ ಪರಿಹಾರ ಕೊಡುವಂತೆ ಇದನ್ನು ನೀವು ಮಾಡುವುದಕ್ಕಾಗುವುದಿಲ್ಲ, ನಾವು ಒತ್ತಾಯ ತರುತ್ತೇವೆ, ನೀವು ರೈತರ ಪರವಾಗಿದ್ದರೆ ನಮಗೆ ಸಹಕಾರ ಕೊಡುತ್ತೀರಿ. ಆ ವಿಶ್ವಾಸ ನಮಗಿದೆ.

ಅಧ್ಯಕ್ಷರು:- ತಾವು ಪ್ರತಿಪಕ್ಷದ ನಾಯಕರಿದ್ದೀರಿ. ಸನ್ಮಾನ್ಯ ಖಿರ್ಗೆಯವರು ಮಂತ್ರಿಮಂಡಲದಲ್ಲಿ ಕೆಲಸ ಮಾಡಿದವರು. ಸನ್ಮಾನ್ಯ ವೀರಪ್ಪಮೊಯಿಲಿಯವರು ಮಾಜಿ ಮುಖ್ಯಮಂತ್ರಿಗಳಿದ್ದಾರೆ. ವಾಟಾಳ್ ನಾಗರಾಜ್‌ರವರು ಬಹಳ ಹಿರಿಯ ಸದಸ್ಯರು ಇದ್ದಾರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ನಿಮ್ಮ ಭಾವನೆಗಳ ಗಂಭೀರತೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರು ತಮ್ಮೆಲ್ಲರನ್ನೂ ತಕ್ಷಣ ಚರ್ಚೆ ಮಾಡುವುದಕ್ಕೆ ಆಹ್ವಾನ ಮಾಡಿ ನಿಮ್ಮೊಡನೆ ಸುದೀರ್ಘವಾಗಿ ಈ ವಿಚಾರಗಳನ್ನು ಚರ್ಚೆ ಮಾಡಿ ಅದಾದನಂತರ ಸದನಕ್ಕೆ ಒಂದು ಹೇಳಿಕೆ ಕೊಡುವಂತೆ ನಾನು ಮಾಡುತ್ತೇನೆ. ಇಷ್ಟು ಜವಾಬ್ದಾರಿ ನನ್ನ ಮೇಲೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ತೊಗರಿಬೆಳೆ ನಾಶವಾಯಿತು. ಹಿಂದಿನ ಸರ್ಕಾರ ಪರಿಹಾರ ಕೊಟ್ಟಿತು. ಕೋಟ್ಯಾಂತರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದೆ. ಈಗ ಮುಖ್ಯಮಂತ್ರಿಗಳು ಇಲ್ಲ. ಉಪಮುಖ್ಯಮಂತ್ರಿಗಳು ಇರಬೇಕಲ್ಲ. ನಾನು ಹೇಳುತ್ತೇನೆ, ಈ ಸದನ ಅಲ್ಲಿ ಆಡಳಿತ ಪಕ್ಷದ ಯಾವ ಒಂದು ಗೌರವವನ್ನು ಇಲ್ಲಿ ಕೊಡಬೇಕಾಗಿತ್ತು ಕಾರ್ಯಕಲಾಪದ ಸಂದರ್ಭದಲ್ಲಿ, ಅದು ಇಲ್ಲವಲ್ಲ ಸಾರ್. ಮುಖ್ಯಮಂತ್ರಿಗಳು ದೆಹಲಿಗೆ ಹೋಗುವಂಥದ್ದು ಇದೇ ವಿಷಯಕ್ಕೆ ಹೋಗಿದ್ದರೆ ಡೆಪ್ಯೂಟಿ

ಚೀಫ್ ಮಿನಿಸ್ಟರ್ ಇಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಫ್ರಂಟ್ ಬೆಂಚ್‌ನಲ್ಲಿರುವಂಥ ಆ 'ಎ' ಗ್ರೂಪ್ ಇಲ್ಲಿ ಇರಬೇಕಾಗುತ್ತದೆ ನಿಮ್ಮದೇ ಭಾಷೆಯಲ್ಲಿ ಹೇಳುವುದಾದರೆ. ಇವತ್ತು (ಬಿ) ಗುಂಪು ಇಲ್ಲ, (ಎ) ಗುಂಪು ಇಲ್ಲ, (ಸಿ) ಗುಂಪು ಇಲ್ಲ ಎನ್ನುವುದಾದರೆ ನಮ್ಮ ಗತಿ ಏನು ಸ್ವಾಮಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಬ್ಕಾರಿ ಇಲಾಖೆಯಲ್ಲಿ ಸೆಕೆಂಡ್ಸ್ ಎಂದು ಇದೆ. ಅಂದರೆ ಲೇಬಲ್ ಇಲ್ಲದೇ ಇರುವುದು. ಅಷ್ಟೇ. ಸೆಕೆಂಡ್ ಎಂದರೆ ಕೆಟ್ಟಪದಾರ್ಥ ಎಂದಲ್ಲ. ಲೇಬಲ್ ಇಲ್ಲದೇ ಇರುವಂಥದ್ದು ಎಂದು.

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ:- ಮಾನ್ಯ ಸಿದ್ದರಾಮಯ್ಯನವರು ಒಪ್ಪಿಕೊಂಡಿದ್ದಾರೆ. ಸೆಕೆಂಡ್ಸ್ ಒಂದೇ ಅಲ್ಲ. ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಲ್ಲಿ ಫಸ್ಟ್ ಒಂದು, ಸೆಕೆಂಡ್ಸ್, ಒಂದು, ಈಗ ಹೊಸದಾಗಿ ಥರ್ಡ್ ಒಂದು ಹೊರಟಿದೆ ಎಂದು ಅವರೇ ಹೇಳಿದ್ದಾರೆ. ಕೌನ್ಸಿಲ್‌ನಲ್ಲಿ ಮಾತನಾಡುವಾಗ ಈ ಮಾತನ್ನು ಅವರೇ ಸರಿಪಡಿಸಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್:- ಈ ಕಡೆ ಇರುವವರನ್ನು ಸೆಕೆಂಡ್ಸ್ ಎಂದಾದರೆ ಅಲ್ಲಿರುವವರು ಹಾಗೆಯೇ ಆಗುತ್ತಾರೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಗುಣಮಟ್ಟವಲ್ಲ. ಲೇಬಲ್ ಬಗ್ಗೆ. ಮಂತ್ರಿಗಳು ಅವರೇನು ಮಾಡಿದರು, ಒಂದು ಹೇಳಿಕೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಅದೇ ರೀತಿ ಮಾಡುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಮ್ಮ ಎಸ್.ಎಸ್.ಪಾಟೀಲರು ಹೇಳಿದರು, ಇಲ್ಲಿ ಹಿಂದೆ ಕುಳಿತವರಿಗೂ ಹೀಗೆಯೇ ಎನ್ನುತ್ತೀರಾ ಎಂದು ಕೇಳಿದರು. ಹಾಗಲ್ಲ. ಎದುರುಗಡೆ ಇದ್ದಾಗ ಏನಾಗುತ್ತದೆ ಎಂದರೆ ಯಾರೇ ಒಬ್ಬರು ಜವಾಬ್ದಾರಿ ವಹಿಸಿಕೊಂಡು ಮಾತನಾಡಿದರೆ ಖಂಡಿತವಾಗಿಯೂ ಅವರು ನಮ್ಮ ಮುಖ್ಯಮಂತ್ರಿಯವರ ಪರವಾಗಿಯೇ ಆಶ್ವಾಸನೆ ಕೊಡುತ್ತಿದ್ದಾರೆ, ಹಾಗೆ ಕೊಟ್ಟಂಥ ಆಶ್ವಾಸನೆ ಈಡೇರಿಸುತ್ತಾರೆ ಎನ್ನುವ ನಂಬಿಕೆ ಇದೆ. ಹಿಂದೆ ಯಾವುದೇ ಮಾತು ಈ ಸದನದಲ್ಲಿ ನಮ್ಮ ಶ್ರೀಮಾನ್ ಸಿಂಧ್ಯಾರವರು ಮಾತನಾಡಿದರೆ ನಾವು ಏನು ತಿಳಿದುಕೊಳ್ಳುತ್ತಿದ್ದೆವು ಎಂದರೆ ಮಾನ್ಯ ದೇವೇಗೌಡರ ಪರವಾಗಿಯೇ ಅವರು ಮಾತನಾಡುತ್ತಿದ್ದಾರೆ ಮತ್ತು ಇವರು ಆಶ್ವಾಸನೆ ಕೊಟ್ಟದ್ದು ನಡೆಯುತ್ತದೆ ಎಂದು ಮತ್ತು (ಎ).ಟೀಮ್‌ನಲ್ಲಿ ಅವರು ಇನ್‌ಕ್ಲೂಷನ್ ಆಗಿದ್ದರು. ಒಬ್ಬೊಬ್ಬರಿಗೆ ಒಬ್ಬೊಬ್ಬರ ಮೇಲೆ ನಂಬಿಕೆ ಇರುತ್ತದೆ.

(ಗೊಂದಲ)

ಅದಕ್ಕಾಗಿ ಈಗ ಜೆ.ಹೆಚ್.ಪಟೀಲ್ ಸಮೀಪ ಯಾರು, ದೂರ ಯಾರು ಎಂದು ಇನ್ನು ಗೊತ್ತಾಗಿಲ್ಲ. ಅದಕ್ಕಾಗಿ ಅದು ಗೊತ್ತಾದರೆ ಅವರೇ ಮಾತನಾಡಿದರೆ ಪರವಾಗಿಲ್ಲ.

ಅಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಂಡು ಆಮೇಲೆ ಬೇಡಿಕೆ ಮೇಲೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈಗ ಏನಾಯಿತು ಎಂದರೆ ಖರ್ಗೆಯವರು ಪಾಪ, ಸಿಂಧ್ಯಾ ಮತ್ತು ಮುಖ್ಯಮಂತ್ರಿಗಳನ್ನು ಬೇರ್ಪಡಿಸುತ್ತಿದ್ದಾರೆ. ನಾನು ಅದಕ್ಕೆ ಹೋಗುವುದಿಲ್ಲ ಏಕೆಂದರೆ ಛೇ, ಛೇ, ಪಾಪ ಅವರು ಮುಖ್ಯ ಮಂತ್ರಿಗಳ ಬಹಳ ಹತ್ತಿರದಲ್ಲಿದ್ದಾರೆ. ಇವರು ಹೇಳುವ ಮಾತು ನೋಡಿದರೆ ಮುಖ್ಯಮಂತ್ರಿಗಳಿಗೂ, ಮಾನ್ಯ ಸಿಂಧ್ಯಾರವರಿಗೂ ಬಹಳದೂರ ಇರಬೇಕು ಎಂದು ಭಾವನೆ ಇಟ್ಟುಕೊಂಡಿದ್ದಾರೆ. ನಾನು ಹಾಗೆ ಅಂದುಕೊಂಡಿಲ್ಲ. ನಾನು ಅವರು ಬಹಳ ಹತ್ತಿರದಲ್ಲಿದ್ದಾರೆ ಎಂದು ಅಂದುಕೊಂಡಿದ್ದೇನೆ. ನಮಗೆ ನಿನ್ನೆ ಸಚಿವರು ಕೊಟ್ಟಿರುವ ಮಾತು ಏನಿದೆ ಅದರ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ. ಪ್ರಾಮಾಣಿಕವಾಗಿ ಆ ರೈತರಿಗೆ ಏನಾಗಬೇಕೊ ಅದು ಆಗಿಲ್ಲ. ಹತ್ತು ಲಕ್ಷ ಟನ್ ಕಬ್ಬನ್ನು ಬೆಳೆದು ರೈತರು ಏನು ಕಂಗಾಲಾಗಿದ್ದಾರೆ, ಆ ರೈತರ ಬವಣೆಯನ್ನು ನೀಗುವುದಕ್ಕೆ ಸರ್ಕಾರ ಪರಿಣಾಮಕಾರಿಯಾದಂಥ ಕ್ರಮವನ್ನು ನಿನ್ನೆ ಹೇಳಲಿಲ್ಲ. ನಾನೇ ಅದರ ಬಗ್ಗೆ ಸಲಹೆ ಕೊಟ್ಟೆ. ಎಲ್ಲ ಮುಖಂಡರುಗಳನ್ನು ಕರೆದು ಮಾತುಕತೆಯಾಡಿ ಅಂತಿಮವಾಗಿ ಸರ್ಕಾರ ಒಂದು ತೀರ್ಮಾನಕ್ಕೆ ಬರಲಿ ಎಂದು. ಇದು ಎಷ್ಟು ವರ್ಷಗಳಿಂದ ನಡೆಯುತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ಎರಡು-ಎರಪ್ಪೂವರೆ ವರ್ಷದಿಂದ ಕಬ್ಬನ್ನು ಅರೆಯದೆ, ಕಬ್ಬನ್ನು ಕೊಯ್ಯದೇ ಇರತಕ್ಕಂಥ ಪರಿಸ್ಥಿತಿ ಕೊನೆಗೂ ಸೌದೆಗೆ ಆಗುವುದಿಲ್ಲ ಇತ್ತ ಕಡೆ ಕಬ್ಬು ಸಕ್ಕರೆಗೂ ಆಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ರೈತರು ಬೀದಿ ಪಾಲಾಗತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೆ ನಾವು.....

ಅಧ್ಯಕ್ಷರು:- ನೀವೆಲ್ಲಾ ನಿನ್ನೆ ವ್ಯಾಪಕವಾಗಿ ಚರ್ಚೆ ಮಾಡಿದ್ದೀರಿ, ಪರಿಹಾರ ಕೊಡುವುದು ರೈತರಿಗೆ ತೊಂದರೆಯಾಗಿದೆ ಎನ್ನುವುದು, ಅವೆಲ್ಲಾ ಚರ್ಚೆ ಮಾಡಿದ್ದೇವೆ. ಮುಖ್ಯಮಂತ್ರಿಗಳು ಬಂದತಕ್ಷಣ ಈ ವಿಚಾರವನ್ನು ಪ್ರಸ್ತಾಪಮಾಡಿಸುತ್ತೇನೆ. ಎಲ್ಲಾ ಫ್ಲೋರ್ ಲೀಡರ್ಸ್‌ಗಳ ಮೀಟಿಂಗ್ಸ್ ವ್ಯವಸ್ಥೆ ಮಾಡಿಸಿಕೊಡುತ್ತೇನೆ. ಮುಖ್ಯಮಂತ್ರಿಗಳು ಒಂದು ಹೇಳಿಕೆ ಮಾಡುವ ಹಾಗೆ ಮಾಡುತ್ತೇನೆ. ದಯಮಾಡಿ ಅಶೋಕ್ ಪಾಟೀಲ್, ನಾರಾಯಣರಾವ್ ತರಳೆ ಮತ್ತು ಬಿ.ಐ.ಪಾಟೀಲ್ ತಮ್ಮ ಮೂವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಜೊತೆಯಲ್ಲಿ ಗಡಿಯ ಬಗ್ಗೆ ನಮಗೂ ಆವರಿಗೂ ವ್ಯತ್ಯಾಸವಿದ್ದರೂ ಈ ಸಕ್ಕರೆ ವಿಚಾರದಲ್ಲಿ ಅವರ ಜೊತೆ ನಾವು ಸೇರಿಯೇ ಸೇರುತ್ತೇವೆ ಏಕೆಂದರೆ ಅವರೆಂದೂ ನಮ್ಮ ಕರ್ನಾಟಕ ಬಿಟ್ಟು ಹೋಗುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಕರ್ನಾಟಕ ರೈತರ

ಪರವಾಗಿ ಈಗ ಅವರು ಮಾತನಾಡಿರುವುದರಿಂದ ಬೆಳಗಾವಿ ಎಂದೆಂದೂ ಅವಿಭಾಜ್ಯ ಅಂಗ ಎಂದು ಅವರು ತೀರ್ಮಾನ ಮಾಡಿ ನಮ್ಮ ಜೊತೆಯಲ್ಲಿ ಬಂದಿದ್ದರೆ ನಾನು ಇನ್ನು ಸಂತೋಷಪಡುತ್ತೇನೆ.

ಅಧ್ಯಕ್ಷರು:- ಇವರು ಕರ್ನಾಟಕ ಬಿಟ್ಟು ಹೋದರೆ ಕಾರ್ಪೊರೇಟರ್ ಸಹಾ ಆಗುವುದಿಲ್ಲ. ಇಲ್ಲೇ ಇದ್ದರೆ ಎಂಎಲ್ಎಗಳಾಗುತ್ತಾರೆ ಖಾಯಂ ಆಗಿ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ನಾನು ಅವರಿಗೆ ಬೆಂಬಲ ಕೊಡುತ್ತಿದ್ದೇನೆ ಸ್ವಾಮಿ.

ಅಧ್ಯಕ್ಷರು:- ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, I am appealing to you, I will assure you the Hon'ble Members of the' Maharashtra Ekikaran Samithi, as soon as the Hon'ble Chief Minister returns, I will request him to convene a meeting of the Floor Leaders and as well make a brief statement.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮಾತಿನ ಮೇಲೆ ಬಹಳ ನಂಬಿಕೆ ಇದೆ. ನಾವು ಕೂಡ ಧರಣಿ ಮಾಡುವ ಕ್ರಮವನ್ನು ಹಿಂತೆಗೆದುಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ತುಂಬಾ ಧನ್ಯವಾದಗಳು. ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀಯುತರುಗಳಾದ ಶ್ರೀ ಎನ್.ರಾಜಣ್ಣ, ಪಿ.ಎಸ್.ಪ್ರಕಾಶ್, ಹಾಗೂ ಬಿ.ಮುನಿಯಪ್ಪ ಅವರು ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಗಮನ ಸೆಳೆಯುವ ಸೂಚನೆ.

ಶ್ರೀ ಎನ್.ರಾಜಣ್ಣ:- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಹಳೆಯ ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ಹದಗೆಟ್ಟಿರುವ ಬಗ್ಗೆ 1950ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ ಕೇವಲ ನಾಲ್ಕು ಲಕ್ಷ ಇದ್ದದ್ದು .....

ಅಧ್ಯಕ್ಷರು:- ಹಾಗಲ್ಲ ನೀವು ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ ಎಂದು ಹೇಳಬೇಕು.

SRI N.RAJANNA:- Sorry sir, I have to learn this. This is the first time you are allowing me. I have to correct myself.

MR.SPEAKER:- On this issue, first time I am allowing you.

SRI N.RAJANNA:- OK Sir. Thank you sir.